ಮೇಲೆ ಬೆರಳಿನಿಂದ ಉಜ್ಜಿದ.

"ಬಿದ್ದಪ್ಪ, ರುದ್ರಮುನಿಯ ಮನೆಲಿ ಕಳ್ಳತನ ಮಾಡಿದ್ದು ಕುಟ್ಟಯ್ಯನೇ ಅಂತ ನನ್ಗೆ ಆ ದಿನವೇ ಗೊತ್ತಾಯ್ತು. ಹೇಗೆ ಗೊತ್ತಾ? ಕಳ್ಳತನವಾಗಿದೆ ಎಂದಾಗ ಹುಳ್ಳಹುಳ್ಳಗಾದ ಆತನ ಮುಖ! ಆ ಮನೆ ದುರಸ್ತಿ ಮಾಡ್ದ ಬಡಗಿಯ ಸಾಕ್ಷ್ಯ. ಅವ್ನು ಬಾಯಿ ಬಿಟ್ಟ... ಬಾಗಿಲನ್ನು ಯಾರೋ ಮುರಿದಿದ್ದರು ಅಂದ! ಮತ್ತೊಂದು ವಿಚಾರವನ್ನು ಅಲ್ಲಿಯ ಕೆಲ್ಸಗಾರರು ಹೇಳಿದ್ರು... ಎಲ್ಲಾ ಕಾಟೇಜುಗಳಿಗೆ ಬೀಗವನ್ನು ಕುಟ್ಟಯ್ಯನೇ ಕೊಡೋದು, ಒಂದು ಕೀ ಆತ ಇಟ್ಟುಕೊಂಡಿರೋದು ರೂಢಿ. ಆದ್ರೆ ಇತ್ತೀಚಿಗೆ ರುದ್ರಮುನಿ ಬೀಗ ಬದಲಾಯಿಸಿದ್ದನಂತೆ! ಕಳ್ಳತನವಾಗಿದ್ರೂ ಆತ ಪೊಲೀಸಿಗೆ ದೂರು ಕೊಟ್ಟಿಲ್ಲ. ಯಾಕೆ? ಎಲ್ಲವೂ ಕುಟ್ಟಯ್ಯನತ್ತವೇ ಬೊಟ್ಟು ಮಾಡ್ತವೆ!"

ಕರಮಚಂದನ ವಿವರಣೆಗೆ ನಾನು ದಂಗಾದೆ.

"ಕಳ್ಳತನ ಯಾಕೆ ಮಾಡ್ದ?"

"ಒಬ್ಬ ಯಜಮಾನ ತನ್ನ ಕೆಲ್ಸಗಾರನ ಮನೆಲಿ ಕಳ್ಳತನ ಯಾಕ್ ಮಾಡಿರಬಹುದು? ಕೆಲ್ಸಗಾರ ಎಸ್ಟೇಟಿಂದ ಏನೋ ಕದ್ದಿರಬೇಕು! ರುದ್ರಮುನಿ ಬೀಗ ಬದಲಾಯಿಸಿದ್ದು ಆ ಸಂಶಯವನ್ನು ಪುಷ್ಟೀಕರಿಸುತ್ತೆ. ಏನು ಕದ್ದಿರಬಹುದು? ಕಾಫಿ ಬೀಜ ಕದ್ದಿಡಲು ಕಾಟೇಜಲ್ಲಿ ಸಾಧ್ಯವೆ? ಅದು ಹಣವೇ ಇರಬೇಕು! ಹಣ ರುದ್ರಮುನಿ ಎಲ್ಲಿಂದ ಕದ್ದಿದ್ದು? ತಿಜೋರಿ ಒಡೆದಿದ್ದರೆ, ಮೋಸ ಮಾಡಿ ಕಾಸು ಲಪಟಾಯಿಸಿದ್ದರೆ ಪೊಲೀಸ್‌ಗೆ ದೂರು ಹೋಗಿರಬೇಕಲ್ಲ... ಅಂತಹದು ಏನೂ ಸಂಭವಿಸಿಲ್ಲ ಅಂದ್ರೆ ಹಣ ಹೇಗೆ ಬಂದಿರಬಹುದು? ಒಂದೋ ಬ್ಲಾಕ್‌ಮೇಲ್ ಮಾಡಿರಬೇಕು ಅಥವಾ ಪೊಲೀಸ್‌ಗೆ ದೂರು ಕೊಡದಂತಹ ಹಣ ಆಗಿರಬೇಕು, ಉದಾಹರಣೆಗೆ, ಪಾಲುದಾರರಿಗೆ ಲೆಕ್ಕ ತೋರಿಸದ ಹಣ ಅಥವಾ ಕಪ್ಪು ಹಣ. ಎಸ್ಟೇಟು ಕುಟ್ಟಯ್ಯನದ್ದೇ, ಹಾಗಾಗಿ ಆತ ಯಾರಿಗೂ ಲೆಕ್ಕ ತೋರಿಸುವ ಅಗತ್ಯವೇ ಇಲ್ಲ, ಕಾಫಿಯು ಕೃಷಿ ಉತ್ಪನ್ನವಾದ್ದರಿಂದ ತೆರಿಗೆಯೂ ಕಮ್ಮಿ... ಹಾಗಾಗಿ ಕೊನೆಯ ಸಾಧ್ಯತೆ ಕಡಿಮೆ. ಉಳಿದದ್ದು ಬ್ಲಾಕ್‌ಮೇಲ್ ಮಾತ್ರ! ಕುಟ್ಟಯ್ಯನ ಯಾವುದೋ ರಹಸ್ಯವನ್ನು ರುದ್ರಮುನಿ ಕಂಡು ಹಿಡಿದು, ಆತನಿಂದ ಒತ್ತೆಸುಲಿಗೆ ಹಣ ವಸೂಲು ಮಾಡಿರಬೇಕು ಎಂಬ ತೀರ್ಮಾನಕ್ಕೆ ಬಂದೆ. ಏನು ರಹಸ್ಯ? ಯಾವುದೋ ಅಪರಾಧ, ಕಾನೂನು ಉಲ್ಲಂಘನೆ ಅಥವಾ ಅನೈತಿಕ ಸಂಬಂಧ... ಮೂರನೆಯ ಸಾಧ್ಯತೆ ಹೆಚ್ಚು ಅಂತ ಅನ್ನಿಸಿತು. ಬ್ಲಾಕ್‌ಮೇಲ್‌ಗೆ ಇನ್ನೊಂದು ಆಧಾರವೂ ದೊರಕಿತು. ರುದ್ರಮುನಿಯ ಕಪಾಟಿನಲ್ಲಿ ಕೆಲ ಲಕೋಟೆಗಳು ಸಿಕ್ಕಿದ್ದವು ನೆನಪಿದೆಯಾ? ಅವುಗಳೆಲ್ಲದರಲ್ಲೂ ಕುಟ್ಟಯ್ಯನದ್ದೇ ವಿಳಾಸವಿತ್ತು, ಕುಟ್ಟಯ್ಯನಿಗೆ ಬಂದಂತಹ ಪತ್ರಗಳ ಲಕೋಟೆಗಳು ರುದ್ರಮುನಿಯ ಕಪಾಟಿನಲ್ಲಿ ಹೇಗೆ ಬಂದವು? ನಾನು ಕುಟ್ಟಯ್ಯನ ಕಚೇರಿಯಲ್ಲಿ ವಿಚಾರಿಸಿದೆ. ಕುಟ್ಟಯ್ಯ ಕೆಲವೊಮ್ಮೆ ಭಾರೀ ಮೊತ್ತವನ್ನು ಕವರಿನಲ್ಲಿ ತುಂಬಿಸಿ ಕೊಡುವಂತೆ ತನ್ನ ಗುಮಾಸ್ತರಿಗೆ ಹೇಳುತ್ತಿದ್ದನಂತೆ! ಅವರಿಗೂ ಅದು ಯಾಕೆ ಅನ್ನೋದು ಗೊತ್ತಿಲ್ಲ ಅಂತ ಹೇಳಿದ್ರು. ಅಲ್ಲಿಗೆ ಬ್ಲಾಕ್‌ಮೇಲ್ ಸಿದ್ಧಾಂತ ಬಹುತೇಕ ನಿಸ್ಸಂಶಯವಾಗಿ ಸಾಬೀತಾದಂತಾಯ್ತು, ಅಲ್ವೆ?"

"ಆದ್ರೆ ಕುಟ್ಟಯ್ಯನಿಗೆ ರುದ್ರಮುನಿಯ ಮೇಲೆ ಯಾಕೆ ಸಂಶಯ ಬಂತು?"

"ರುದ್ರಮುನಿ ಎಲ್ಲೋ ಸುಳಿವು ಬಿಟ್ಟುಕೊಟ್ಟಿರಬಹುದು. ಉದಾಹರಣೆಗೆ, ಆತ ತನ್ನ ಮನೆ ಬೀಗ ಬದಲಾಯಿಸಿದ್ದು. ಕುಡ್ದಾಗ ಯಾರ ಬಳಿಯಾದ್ರೂ ಹೇಳಿರಲೂ ಬಹುದು..."

"ಅಂದ್ರೆ, ಕುಟ್ಟಯ್ಯ ಬೇಕಂತಲೇ ತನ್ನ ವಿಳಾಸವಿರುವ ಲಕೋಟೆಗಳಲ್ಲಿ ನಗದು ಕೊಡ್ತಿದ್ದ